ಈ ದಿನ ದಿನಾಂಕಃ 26-09-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲು ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

ಈ ದಾವೆಯನ್ನು ವಾದಿ ಎಷ್ಟು ಎಕರೆ ಜಮೀನಿಗೆ ಹೂಡಿರುತ್ತಾರೆ ಎಂದರೆ ಸಾಕ್ಷಿ 2 ಎಕರೆ 30 ಗುಂಟೆ ಜಮಿನಿಗೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಚೆಕ್ಕಬಂದಿ ಪೂರ್ವಕ್ಕೆ ರಾಯಪ್ಪ ಮತ್ತು ಮಂಜುನಾಥರವರ ಜಮೀನು, ಪಶ್ಚಿಮಕ್ಕೆ ರಮೇಶ್ ಬಿನ್ ಚೆನ್ನಬಸಪ್ಪರವರ ಜಮೀನು, ಉತ್ತರಕ್ಕೆ ಜಿಲ್ಲಾ ಮುಖ್ಯ ರಸ್ತೆ, ದಕ್ಷಿಣಕ್ಕೆ ಕೇಶವ ಬಿನ್ ವೀರಪ್ಪರವರ ಜಮೀನು. ಸದರಿ ಚೆಕ್ಕುಬಂದಿಯೊಳಗಿನ ಜಮೀನು ಸರ್ವೆ ನಂ 8/7ರಲ್ಲಿನ 2 ಎಕರೆ 27 ಗುಂಟೆಯದ್ದಾಗಿದೆ ಎಂದರೆ ಸರಿ. ಸದರಿ ಆಸ್ತಿಯ ಹಕ್ಕುದಾರಿಕೆ ವಾದಿಗೆ ಬಿಟ್ಟು ಬೇರೆ ಯಾರಿಗೂ ಇಲ್ಲ ಎಂದರೆ ಸರಿ. ದಾವಾಸ್ತಿಗೆ ಸಂಬಂಧಿಸಿದ ಕಂದಾಯ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾವಾಸ್ತಿಯ ಕಂದಾಯ ದಾಖಲೆಗಳ ವಾದಿಯ ಹೆಸರಿನಲ್ಲಿವೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣಾ ಪ್ರ.ಪತ್ರವನ್ನು ಸಲ್ಲಿಸುವ ಸಮಯಕ್ಕೆ ಸರ್ವೆ ನಂಬರುಗಳಿಗೆ ಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನು ನೋಡಿರುತ್ತೇನೆ.

ಸರ್ವೆ ನಂ 5 ರಲ್ಲಿ ಎಷ್ಟು ಪೋಡುಗಳಾಗಿದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ 7 ರಿಂದ 9, 12 ಮತ್ತು 13 ಎಷ್ಟು ಪೋಡುಗಳಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರುಗಳಲ್ಲಿ ಎಷ್ಟು ಕರಾಬು ಜಮೀನುಗಳು ಇವೆ ಎಂದು ನಾನು ದಾಖಲೆಗಳನ್ನು ನೋಡಿರುತ್ತೇನೆ ಆದರೆ ನನಗೆ ನೆನಪಿಲ್ಲ. ಸದರಿ ಕರಾಬಿಗೆ ಸಂಬಂಧಿಸಿದಂತೆ ನಾನು ಪಹಣಿ ದಾಖಲೆಗಳನ್ನು ನೋಡಿರುತ್ತೇನೆ. ಸರ್ವೆ ನಂ 5 ರಲ್ಲಿ ಎಷ್ಟು ಕರಾಬ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

ಗ್ರಾಮ ನಕ್ಷೆಯಲ್ಲಿ ನಕಾಶೆ ಕಂಡ ದಾರಿ ಇದೆ ಎಂದು ನನ್ನ ಪ್ರ.ಪತ್ರದಲ್ಲಿ ಉಲ್ಲೇಖಿಸಿದ್ದು, ಸರ್ವೆ ನಂ 8 ಮತ್ತು 9 ರಲ್ಲಿನ ಅನುಭವದಾರರು ನಕಾಶೆ ಕಂಡ ಬಂಡಿದಾರಿಯನ್ನು ಎಷ್ಟು ವರ್ಷಗಳಿಂದ ಮುಚ್ಚಿ ಸಾಗು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಬುದ್ದಿಬಂದಾಗಿನಿಂದ ಸುಮರು 25 ವರ್ಷಗಳಿಂದ ಮುಚ್ಚಿ ಸಾಗು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. 25 ವರ್ಷಗಳಿಂದ 2018 ನೇ ಸಾಲಿನವರೆಗೂ ಸದರಿ ಬಂಡಿದಾರಿಯನ್ನು ಮುಚ್ಚಿದ ಕುರಿತು ಯಾರು ಸಹ ತಕರಾರು ತೆಗೆದಿಲ್ಲ ಎಂದರೆ ಸರಿ.

ಹಾಗಾಗಿ ಸರ್ವೆ ನಂ 8 ಮತ್ತು 9 ರಲ್ಲಿ ನಕಾಶೆ ಕಂಡ ದಾರಿ ಗ್ರಾಮ ನಕ್ಷೆಯಲ್ಲಿ ಆಸ್ತಿತ್ವದಲ್ಲಿ ಇರುವ ಕುರಿತು ಮೊದಲ ಬಾರಿಗೆ 1ನೇ ಪ್ರತಿವಾದಿ 2018ರಲ್ಲಿ ವಾದಿಯ ಸರ್ವೆ ನಂಬರಿನಲ್ಲಿ ದಾರಿ ಇದೆ ಎಂದು ತಕರಾರು ತೆಗೆದಿರುತ್ತಾರೆ ಎಂದರೆ ಸರಿ. ಸದರಿ ನಕಾಶೆ ಕಂಡ ದಾರಿ ಯಾರು ಉಪಯೋಗಿಸದ ಕಾರಣ ಮುಚ್ಚಿಹೋಗಿರುತ್ತದೆ ಎಂದರೆ ಸರಿ. ಸದರಿ ನಕಾಶೆ ಕಂಡ ದಾರಿಯ ತೆರವಿಗಾಗಿ 1ನೇ ಪ್ರತಿವಾದಿ ತಹಶೀಲ್ದಾರ್ ವರಿಗೆ ಅದನ್ನು ಖುಲ್ಲಾ ಮಾಡಿಕೊಡುವ ಕುರಿತು ಅರ್ಜಿ ದಾಖಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯ ಆಧಾರದ ಮೇಲೆ ತಹಶೀಲ್ದಾರ್ ರವರು ಮಾಡಿದ ಆದೇಶವನ್ನು ನೋಡಿರುತ್ತೀರ ಎಂದರೆ ಸಾಕ್ಷಿ ನಾನು ಮರೆತು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಆದೇಶವನ್ನು ತಹಶೀಲ್ದಾರ್ ರವರು ಯಾವ ವರ್ಷದಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿ 2019-20 ರಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆ 2018 ರಿಂದಲೂ ಸಹ ಚಾಲ್ತಿಯಲ್ಲಿದೆ ಎಂದರೆ ಸರಿ.

ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟ ತರುವಾಯ ಸರ್ವೆ ಇಲಾಖೆಯವರು ಸರ್ವೆ ನಂ 5,7,8,9,12 ಮತ್ತು 13 ನೇ ಜಮೀನುಗಳಿಗೆ ಭೇಟಿ ನೀಡಿದರು ಎಂದರೆ ಸರಿ. ಸದರಿಯವರು ಯಾವ ಯಾವ ಸರ್ವೆ ನಂಬರುಗಳಲ್ಲಿ ನಕಾಶೆ ಕಂಡ ದಾರಿ ಮುಚ್ಚಿಹೋಗಿರುತ್ತದೆ ಎಂದು ವರದಿಯನ್ನು ಸಹ ನೀಡಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ಸರ್ವೆಯರ್ ರವರು ನಿಪಿ-3 ರಂತೆ ನಕ್ಷೆಯನ್ನು ತಯಾರಿಸಿರುತ್ತಾರೆ ಎಂದರೆ

ಸರಿ. ಸದರಿ ನಕ್ಷೆಯಲ್ಲಿ ಸರ್ವೆ ನಂ 12 ಮತ್ತು 13 ಕ್ಕೆ ಸಂಬಂಧಿಸಿದಂತೆ ಷರಾವನ್ನು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ 9 ರ ಕುರಿತು ಸದರಿ ನಕ್ಷೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

ಸರ್ವೆ ನಂ 6,8,10 ಮತ್ತು 11 ರಲ್ಲಿ ಪಿ ಡಬ್ಲ್ಯೂ ಡಿ ಇಲಾಖೆಯವರು ರಸ್ತೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿ ಜಿಲ್ಲಾ ಮುಖ್ಯ ರಸ್ತೆಯನ್ನು ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಿಲ್ಲಾ ಮುಖ್ಯರಸ್ತೆ 1902 ರಲ್ಲಿ ತಯಾರಾದ ಗ್ರಾಮ ನಕ್ಷೆಯಲ್ಲಿ ನಮೂದು ಇಲ್ಲ ಎಂದರೆ ಸರಿ. ಹಾಗಾಗಿ ಸದರಿ ನಕಾಶೆ ಕಂಡ ದಾರಿ ಮುಚ್ಚಿಹೋದ ಕಾರಣ ಜನರಿಗೆ ಜಮೀನಿನುಗಳಿಗೆ ಹೋಗಲು ಅನುವು ಮಾಡಿಕೊಡಲು ಸರ್ಕರದ ವತಿಯಿಂದ ಚಿರಡೋಣಿಯಿಂದ ದೊಡ್ಡಘಟ್ಟದವರೆಗೂ ಸದರಿ ರಸ್ತೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ಹಾಗಾಗಿ ಸ್ಥಳದ ಯಾಥಾಸ್ಥಿತಿಯಂತೆ ಚಿರಡೋಣಿ ದೊಡ್ಡಘಟ್ಟ ರಸ್ತೆಯನ್ನು ಹೊರತುಪಡಿಸಿ ಯಾವುದೇ ದಾರಿ ಸ್ಥಳದಲ್ಲಿ ಇಲ್ಲ ಎಂದರೆ ಸರಿ.

ಪ್ರತಿವಾದಿ ಸರ್ವೆ ನಂ 13 ರಲ್ಲಿ ಅನುಭವದಲ್ಲಿದ್ದಾರೆ ಎಂದರೆ ಸರಿ.ಸದರಿ ಸರ್ವೆ ನಂ 13 ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿ ಸದರಿ ಜಮೀನನ್ನು 25 ವರ್ಷಗಳ ಹಿಂದೆ ಖರೀದಿಸಿರುತ್ತಾರೆ. ಸರ್ವೆ ನಂ 5 ರಲ್ಲಿ ಯಾರು ಯಾರು ಅನುಭವದಲ್ಲಿರುತ್ತಾರೆ ಎಂದರೆ ಸಾಕ್ಷಿ ಶ್ರೀನಿವಾಸ , ರಮೇಶ ಬಿನ್ ಚನ್ನಬಸಪ್ಪ , ನರಸಿಂಹಪ್ಪ , ರಂಗಪ್ಪ , ಬಸಪ್ಪ , ದೊಡ್ಡಪ್ಪ , ಮತ್ತು ಇತರರು ಅನುಭವದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಸದರಿ ರಂಗಪ್ಪ/ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾವುದೇ ಸರ್ವೆ ನಂಬರುಗಳ ಹಕ್ಕುದಾರರು ನಕಾಶೆ ಕಂಡ ದಾರಿಯ ಕುರಿತು ಯಾವುದೇ ತಕರಾರನ್ನು ಮಾಡಿಲ್ಲ ಎಂದರೆ ಸರಿ. ಹಾಗಾಗಿ ದಾವೆಯ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಪ್ರತಿವಾದಿ ತಯಾರಿಸಿದ ಪ್ರ.ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ, ನಾನು ಪ್ರತಿವಾದಿ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.